# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್‌ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:agmtax@cescmysore.org
CIN:U40109KA2004SGCO35177

C.E.S.C. MYSORE

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ, 2ನೇ ಹಂತ,
ಹಿನಕಲ್, ಮೈಸೂರು.570017.

ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/19–20/ CYS-1685 ದಿನಾಂಕ: 20 MAR 2020

## ಸುತ್ತೋಲೆ

ವಿಷಯ:–ಒಳಪೂರೈಕೆದಾರರ ಸರಕು ಹಾಗೂ ಸೇವಾ ಹುಂಡಿಗಳನ್ನು ಪಾವತಿಸುವ ಸಂದರ್ಭದಲ್ಲಿ, ಸದರಿ ಹುಂಡಿಗಳಿಗೆ ಸಂಬಂಧಿಸಿದ ಜಿ.ಎಸ್.ಟಿ.ಆರ್–1ರ ಪ್ರತಿಗಳನ್ನು ಗುತ್ತಿಗೆದಾರರಿಂದ ಪಡೆದು ನಂತರ ಪಾವತಿಸುವ ಬಗ್ಗೆ.

ಉಲ್ಲೇಖ:–1)ಈ ಕಛೇರಿ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ ಸಿವೈಎಸ್–404/ ದಿನಾಂಕ:07.07.2017.

2) ಈ ಕಛೇರಿ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ ಸಿವೈಎಸ್–540/ ದಿನಾಂಕ:31.07.2017.

3) ಈ ಕಛೇರಿ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ ಸಿವೈಎಸ್–940/ ದಿನಾಂಕ:04.11.2017.

4) ಈ ಕಛೇರಿ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/18–19/ ಸಿವೈಎಸ್–1921/ ದಿನಾಂಕ:27.03.2019.

5) ಈ ಕಛೇರಿ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/19–20/ ಸಿವೈಎಸ್–273/ ದಿನಾಂಕ:29.05.2019.

6) ಈ ಕಛೇರಿ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/19–20/ ಸಿವೈಎಸ್–461/ ದಿನಾಂಕ:05.07.2019.

***********

ಮೇಲ್ಕಂಡ ಉಲ್ಲೇಖಗಳ ಅನ್ವಯ ಈ ಹಿಂದೆ ನಿಗಮದ ನೋಂದಾಯಿತ (Registered) ಒಳಪೂರೈಕೆದಾರರ (Inward Supply) ಸರಕು ಮತ್ತು ಸೇವಾ ಹುಂಡಿಗಳನ್ನು ಪಾವತಿಸುವ ಸಂದರ್ಭದಲ್ಲಿ, ಸದರಿ ಗುತ್ತಿಗೆದಾರರ ಹುಂಡಿಗಳಿಗೆ ಸಂಬಂಧಿಸಿದ ಜಿ.ಎಸ್.ಟಿ.ಆರ್–1ರ ಪ್ರತಿಗಳನ್ನು ಪಡೆದು ಹುಂಡಿಗಳನ್ನು ಪಾವತಿಸುವಂತೆ ಹಾಗೂ ಸದರಿ ವಿವರಗಳನ್ನು ನಿಗಧಿತ ಒಳಪೂರೈಕೆ ನಮೂನೆಗಳಲ್ಲಿ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಆದರೂ ಸಹ ಕೆಲವು ಲೆಕ್ಕ ಘಟಕಗಳಲ್ಲಿ ಸದರಿ ಮಾಹಿತಿಗಳನ್ನು ಪಡೆಯದೇ ಹುಂಡಿಗಳನ್ನು ಪಾವತಿಸುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಹಾಗೂ ಕೆಲವು ಲೆಕ್ಕ ಘಟಕಗಳಲ್ಲಿ ಸರಬರಾಜುದಾರರ ಹುಂಡಿ ಪಾವತಿಸುವಾಗ ಜಿ.ಎಸ್.ಟಿಗೆ ಸಂಬಂಧಿಸಿದಂತೆ ಕಂಡುಬಂದಿರುವ ಕೆಲವು ನ್ಯೂನ್ಯತೆಗಳು ಈ ಕೆಳಕಂಡಂತಿವೆ.

1) ಸರಬರಾಜು/ಸೇವಾದಾರರು ನಿಗಮಕ್ಕೆ ನೀಡಿರುವ/ಪೂರೈಸಿರುವ ಸರಕು ಮತ್ತು ಸೇವೆಗಳ ಹುಂಡಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಸದರಿ ಹುಂಡಿಗಳ ವಿವರಗಳನ್ನು ಅವರ (ಸರಬರಾಜು/ಸೇವಾದಾರರು) ಜಿ.ಎಸ್.ಟಿ ಪೋರ್ಟಲ್‌ನಲ್ಲಿ ನಿಗಮಕ್ಕೆ ಪೂರೈಸಿದ ಸರಕು ಮತ್ತು ಸೇವಾ ತೆರಿಗೆ ವಿವರಗಳನ್ನು ಸದರಿಯವರ ಜಿ.ಎಸ್.ಟಿ.ಆರ್–1ರ ಬಿ2ಬಿ ಅನುಬಂಧದಲ್ಲಿ ಅಪ್ಲೋಡ್ ಮಾಡುವ ವಿವರಗಳನ್ನು ಪಡೆಯದೇ ಇರುವುದು ಕಂಡುಬಂದಿರುತ್ತದೆ.

ಪು.ತಿ.ನೋ

2) ನಿಗಮದ ಒಳ ಪೂರೈಕೆ/ಹೊರ ಪೂರೈಕೆ ಮತ್ತು ಸೇವಾದಾರರು ಹುಂಡಿಗಳನ್ನು ಪಾವತಿಗಾಗಿ ಸಲ್ಲಿಸುವ ಸಮಯದಲ್ಲಿ ಇನ್ವಾಯ್ಸ್ ಸಂಖ್ಯೆಯನ್ನು ನಮೂದಿಸದೇ ಪಾವತಿಗಾಗಿ ಸಲ್ಲಿಸುತ್ತಿದ್ದು, ಅಂತಹ ಹುಂಡಿಗಳಲ್ಲಿ ಯಾವುದೇ ಕಾರಣಕ್ಕೂ ಜಿ.ಎಸ್.ಟಿ ತೆರಿಗೆ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸುವಂತಿಲ್ಲ.

3) ಸರಬರಾಜು/ಸೇವಾದಾರರು ಜಿ.ಎಸ್.ಟಿ.ಆರ್-1ರ ಅಪ್ಲೋಡ್ ಮಾಡಿರುವ ಮಾಹಿತಿಯ ಪ್ರತಿಯನ್ನು ಸಂಬಂಧಪಟ್ಟ ಲೆಕ್ಕ ಘಟಕಗಳಿಗೆ ಹುಂಡಿಯೊಂದಿಗೆ ಸಲ್ಲಿಸದಿರುವುದು ಕಂಡುಬಂದಿರುತ್ತದೆ.

4) ನಿಗಮದ ಕೆಲವು ಲೆಕ್ಕ ಘಟಕಗಳಲ್ಲಿ ಹುಂಡಿಗಳನ್ನು ಪಾವತಿಸುವ ಸಂದರ್ಭದಲ್ಲಿ ಸರಬರಾಜು/ಸೇವಾದಾರರಿಂದ ಜಿ.ಎಸ್.ಟಿ.ಆರ್-1ರ ಮಾಹಿತಿಯನ್ನು ಪಡೆಯದೇ ಹುಂಡಿಗಳನ್ನು ಪಾವತಿಸುತ್ತಿರುವುದು ಕಂಡುಬಂದಿರುತ್ತದೆ.

5) ನಿಗಮದ ಎಲ್ಲಾ ಲೆಕ್ಕ ಘಟಕಗಳಲ್ಲಿ ಸರಬರಾಜು/ಸೇವಾದಾರರ ಹುಂಡಿಗಳ ಪಾವತಿ ನಂತರವೂ ನಿಗಮದ GSTIN ಸಂಖ್ಯೆಗೆ ಜಿ.ಎಸ್.ಟಿ.ಆರ್-1ರಲ್ಲಿ ತೆರಿಗೆ ವಿವರಗಳನ್ನು ಅಪ್ಲೋಡ್ ಮಾಡಿರುವ ಮಾಹಿತಿಯನ್ನು ಪಡೆಯದಿರುವುದು ಕಂಡುಬಂದಿರುತ್ತದೆ.

6) ಸರಬರಾಜು/ಸೇವಾದಾರರು ಸಂಬಂಧಿಸಿದ ಲೆಕ್ಕ ಘಟಕಗಳಿಗೆ ಪಾವತಿಗಾಗಿ ಸಲ್ಲಿಸಿದ ಹುಂಡಿಗಳನ್ನು ವಿಭಾಗದವರು ಪಾಸ್ ಮಾಡಿದ ನಂತರ ಸದರಿ ಪಡೆದಿರುವ ಜಿ.ಎಸ್.ಟಿ ತೆರಿಗೆ ಮೊತ್ತದ ಪಾವತಿ ವಿವರಗಳನ್ನು ಅನೋಂದಾಯಿತ (Un-registered) ಪೂರೈಕೆದಾರೆಂದು ಪರಿಗಣಿಸಿ, ಜಿ.ಎಸ್.ಟಿ ಪೋರ್ಟಲ್‌ನಲ್ಲಿ B2CSನಲ್ಲಿ (Un-registered Dealer) ನಮೂದಿಸುತ್ತಿರುವುದು ಕಂಡುಬಂದಿರುತ್ತೆದೆ.

7) ನಿಗಮವು ಮೇಲಿನ ನ್ಯೂನ್ಯತೆಗಳಿಂದ Input Tax Credit ಪಡೆದುಕೊಳ್ಳಲು ಸಾಧ್ಯವಾಗದಿರುವ ಕಾರಣ ಆರ್ಥಿಕ ನಷ್ಟ ಸಹ ಉಂಟಾಗುತ್ತಿರುತ್ತದೆ.

ಈ ರೀತಿಯಾಗಿ ನಿಯಮಗಳನ್ನು ಉಲ್ಲಂಘಿಸಿ ಮಾಹಿತಿಗಳನ್ನು ಸಲ್ಲಿಸುವುದರಿಂದ ನಿಗಮದ ಎಲ್ಲಾ ಘಟಕಗಳ ವಿವರಗಳನ್ನು ತಪ್ಪಾಗಿ ಕ್ರೋಢೀಕರಿಸಿದ ಮಾಹಿತಿಯನ್ನು ಈ ಕಛೇರಿಯಿಂದ ಜಿ.ಎಸ್.ಟಿ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಅನಿವಾರ್ಯತೆ ಉಂಟಾಗಿರುತ್ತದೆ. ಆದ್ದರಿಂದ ಸರಕು ಮತ್ತು ಸೇವಾ ಸರಬರಾಜುದಾರರಿಂದ ಹುಂಡಿ ಸಲ್ಲಿಕೆ ಸಂದರ್ಭದಲ್ಲಿ ಮತ್ತೊಮ್ಮೆ ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ವಿವರಿಸಿದೆ.

A) ಮುಂದಿನ ದಿನಗಳಲ್ಲಿ ತಮ್ಮ ಕಛೇರಿಯಲ್ಲಿ ನೋಂದಾಯಿತ (Registered) ಪೂರೈಕೆ/ಸೇವಾದಾರರಿಂದ ಒಳಪೂರೈಕೆ ಮಾಡಿರುವ ಸರಕು ಹಾಗೂ ಸೇವೆಗಳ ಹುಂಡಿಗಳ ಸಲ್ಲಿಸುವ ಸಂದರ್ಭದಲ್ಲಿ ಹುಂಡಿಯಲ್ಲಿ ಈ ಕೆಳಕಂಡ ಮಾಹಿತಿಗಳು ನಮೂದಿಸಲಾಗಿದಿಯೆ ಎಂದು ಪರಿಶೀಲಿಸುವುದು.

1) ಪೂರೈಕೆ/ಸೇವಾದಾರರ GSTIN ಸಂಖ್ಯೆಗೆ ಹಾಗೂ ಕಂಪನಿಯ ಹೆಸರು.
2) ನಿಗಮದ GSTIN ಸಂಖ್ಯೆ ಹಾಗೂ ಹೆಸರು.
3) ಇನ್ವಾಯ್ಸ್ ಸಂಖ್ಯೆ ಹಾಗೂ ದಿನಾಂಕ.
4) ಸೇವಾ/ಸರಕುಗಳ HSN ಸಂಖ್ಯೆ.
5) ಸೇವಾ/ಸರಕುಗಳ ಮಾಹಿತಿ ಹಾಗೂ ಮೊತ್ತ.
6) ತೆರಿಗೆ ಮೊತ್ತ.
7) ಸಂಬಂಧಪಟ್ಟವರಿಂದ ದೃಢೀಕರಣ.

B) ಸರಬರಾಜು/ಸೇವಾದಾರರು ಹುಂಡಿಗಳ ಮಾಹಿತಿಯ ವಿವರಗಳನ್ನು ಅವರ ಜಿ.ಎಸ್.ಟಿ.ಆರ್-1ರ B2B (Registered Dealer)ನಲ್ಲಿ ನಿಗಮದ GSTIN ಸಂಖ್ಯೆಗೆ ತೆರಿಗೆ ಮೊತ್ತದ ವಿವರಗಳನ್ನು ಫೈಲಿಂಗ್ ಮಾಡಿರುವ ಮಾಹಿತಿಯನ್ನು ಪಡೆದು ಹುಂಡಿಗಳನ್ನು ಪಾವತಿಸುವಂತೆ ಸೂಚಿಸಿದೆ.

C) ಸರಬರಾಜು/ಸೇವಾದಾರರ ಮಾಹೆವಾರು ನಿಗಮ ಕಛೇರಿಯ ಒಳಪೂರೈಕೆಯ ನಮೂನೆಗಳಲ್ಲಿ ಸದರಿಯವರ ಹುಂಡಿಗಳ ವಿವರಗಳನ್ನು ಮುಂದಿನ ಕ್ರಮಕ್ಕಾಗಿ ತೆರಿಗೆ ಶಾಖೆಗೆ ಸಲ್ಲಿಸತಕ್ಕದ್ದು.

ಪು.ತಿ.ನೋ.

**D)** ವಲಯ/ವೃತ್ತ/ವಿಭಾಗಕ್ಕೆ ಸರಬರಾಜು ಮಾಡುವ ಎಲ್ಲಾ ಒಳಪೂರೈಕೆ ಸರಕು ಹಾಗೂ ಸೇವಾ Registered ಸರಬರಾಜು/ಗುತ್ತಿಗೆ/ಸೇವಾದಾರರಿಗೆ ನಿಗಮದ GSTIN ಸಂಖ್ಯೆಯನ್ನು ನೀಡಿ ಜಿ.ಎಸ್.ಟಿ.ಆರ್-1ರ B2B (Registered Dealer)ನಲ್ಲಿ ಅಪ್ಲೋಡ್ ಮಾಡಿ ಮತ್ತು ಸದರಿಯವರು ಫೈಲ್ಲಿಂಗ್ ಮಾಡಿರುವ ಮಾಹಿತಿ ಪಡೆದು ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ. ಹಾಗೂ ವಿಷಯವನ್ನು ಗಂಭೀರವಾಗಿ ಪರಿಗಣಿಸತಕ್ಕದ್ದು.

ಮುಂದುವರೆದು, ಹುಂಡಿಗಳ ಸಲ್ಲಿಕೆ ಸಮಯದಲ್ಲಿ ಈ ಮೇಲೆ ಸೂಚಿಸಿರುವ ಮಾಹಿತಿಗಳು ನಮೂದಿಸಲಾಗಿರುವುದನ್ನು ಖಚಿತಪಡಿಸಿಕೊಂಡು ತೆರಿಗೆ ಪಾವತಿಸುವುದು. ತಪ್ಪಿದಲ್ಲಿ ನಿಗಮಕ್ಕೆ ಉಂಟಾಗುವ ಆರ್ಥಿಕ ನಷ್ಟಕ್ಕೆ ಸಂಬಂಧಪಟ್ಟ ಅಧಿಕಾರಿ/ನೌಕರರುಗಳೇ ನೇರ ಹೊಣೆಗಾರರಾಗಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ.

---

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್(ವಿ) ಕಾ ಮತ್ತು ಪಾ, ವಲಯ ಕಛೇರಿ, ಚಾವಿಸನಿನಿ, ಮೈಸೂರು/ಹಾಸನ,.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),ಕಾ ಮತ್ತು ಪಾ ವೃತ್ತ ಕಛೇರಿಗಳು/ಮೈಸೂರು/ಹಾಸನ/ಮಂಡ್ಯ/ ಚಾಮರಾಜನಗರ ಮತ್ತು ಕೊಡಗು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು, (ಎ&ಆರ್)/(ಇ.ಬಿ.ಸಿ)/(ಹಣಕಾಸು)/(ಆಂ ನಿ), ನಿಗಮ ಕಛೇರಿ ಚಾವಿಸನಿನಿ, ಮೈಸೂರು.
- ಉಪ ಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು/ಮೈಸೂರು/ಹಾಸನ/ಮಂಡ್ಯ/ ಚಾಮರಾಜನಗರ ಮತ್ತು ಕೊಡಗು, ಚಾವಿಸನಿನಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ. ತಮ್ಮ ಅಧೀನ ಕಛೇರಿಗಳಿಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು/ಚಾವಿಸನಿನಿ.
- ಮುಕ.